ಕೆಂಬಟ್ಟೆಯಲ್ಲಿ ತೆಯ್ಯಂನ ಬೆವರು ಗಂಜಿಯಲ್ಲಿ ಮುಗಿಸಿದ್ದುದರಿಂದ ಕರೆಯಾಗಿ ಉಳಿದಿರುತ್ತದೆ. ನೊರೆಕಾಯಿಯಲ್ಲಿ ಬೇಯಿಸಿ ಸಾಬೂನಿನಿಂದ ಉಜ್ಜಿ ಒಗೆಯಬೇಕು. ಒಣಗಿದ ನಂತರ ಇಸ್ತ್ರಿ ಮಾಡಿ ಹೂಬುಟ್ಟಿಯಲ್ಲಿಡುತ್ತಾಳೆ ಜಾನಕಿ. ಅದರ ಮಡಿಕೆಗಳಲ್ಲಿ ಒಂದೆರೆಡು ಜಿರಲೆ ಮಿಠಾಯಿಯನ್ನು ಇಡಲಾಗುತ್ತದೆ. ಹೀಗೆ ಜತನದಿಂದ ಇಟ್ಟರೆ ವರ್ಷಗಳು ಕಳೆದರೂ ಬಣ್ಣ ಮಾಸದೆ ಹೊಸದರಂತೆ ಕಾಣಿಸುತ್ತದೆ. ಆದರೆ ಪಣಿಕ್ಕರ್ ದೇಹವನ್ನು ಮುಪ್ಪು ಆವರಿಸಿದೆ. ಅದು ತೆಯ್ಯಂನ ಅಲಂಕಾರದಲ್ಲೂ ಪ್ರತಿಫಲಿಸುತ್ತಿದೆ. ಅದನ್ನು ತೊಳೆದರೂ, ಗಂಜಿಯಲ್ಲಿ ಅದ್ದಿ ತೆಗೆದರೂ ಹೋಗಲಾರದೆಂದು ಜಾನಕಿಗೆ ತಿಳಿದಿತ್ತು.

ಪಣಿಕ್ಕರ್ ಪೊಟ್ಟಣವನ್ನು ಅಂಗಳದಲ್ಲಿಟ್ಟರು. ಅವರ ಎಳೆಯ ಮಗು ಆಸೆಗಣ್ಣಿನಿಂದ ಅದನ್ನು ತೆಗೆಯಬೇಕೆನ್ನುವಷ್ಟರಲ್ಲಿ ಹಿರಿಯ ಮಗಳು ಅದನ್ನು ತನ್ನ ವಶಕ್ಕೆ ತೆಗೆದುಕೊಂಡಳು. ಅದರಲ್ಲಿ ನಾಲ್ಕೈದು ಬಟ್ಟೆ ಸಾಬೂನುಗಳು ಮತ್ತು ಜಿರಲೆ ಮಿಠಾಯಿಗಳಿದ್ದವು. ಅವಳು ಬರಿದಾದ ಕಾಗದವನ್ನು ಮುದ್ದೆಮಾಡಿ ದೂರಕ್ಕೆಸೆದಳು.

ಪಣಿಕ್ಕರ್‌ರವರ ಮಗ ಸಂಪಿಗೆ ಮರದ ಕೆಳಗೆ ಹೂಗಳನ್ನು ಆಯುತ್ತಿದ್ದ. ಆ ಮರದಲ್ಲಿ ಗುಳಿಗನಿದ್ದಾನೆ. ಹೊರಗೆ ಕಾಣಿಸಿದ ಬಿಸಿಲಿನ ಸೀಳಿನ ಮೇಲೆ ಬೆರಳಾಡಿಸಿ ಪಣಿಕ್ಕರ್ ಚಿಂತಿತರಾದರು. ಈ ಸಲ ಮನೆಯ ಸೂರನ್ನು ಹಾಸದಿರಲು ಸಾಧ್ಯವಿಲ್ಲ. ಗರಿಯೋಲೆಗಳ ಜೊತೆಗೆ ಪಕಾಸುಗಳನ್ನೂ ಬದಲಾಯಿಸಬೇಕು. ಮುತ್ತುಗ ಮರದ ದುರ್ಬಲವಾದ ರೆಂಬೆಗಳನ್ನು ಹಾಸಿದರೆ ಹೀಗೆಯೇ ಒಂದು ವರ್ಷಕ್ಕಿಂತಲೂ ಹೆಚ್ಚಿಗೆ ಬಾಳೋದಿಲ್ಲ. ಗೆದ್ದಲು ಹಿಡಿದ ದ್ವಾರಗಳಿಂದ ಮೀಸೆಗೆ ಒಳಪುಡಿ ಅಂಟಿಸಿಕೊಂಡಿರುವ ಪುಟ್ಟ ಪುಟ್ಟ ಜೀವಿಗಳು ಕೆಳಗೆ ಬದುಕುವವರನ್ನು ಇಣಿಕಿ ನೋಡುತ್ತವೆ. ಮನುಷ್ಯನ ವ್ಯಾಕುಲತೆಗಳನ್ನು ನೋಡುವುದೆಂದರೆ ಅವುಗಳಿಗೆ ಎಲ್ಲಿಲ್ಲದ ಮೋಜು.

ಇದ್ದ ಹತ್ತು ಸೆಂಟು ಜಾಗವನ್ನು ಬ್ಯಾಂಕಿನವರು ವಶಪಡಿಸಿಕೊಂಡಾಗ, ಪಾಪ ಪಣಿಕ್ಕರ್ ದೂಸರಾ ಯೋಚನೆ ಮಾಡದೆ ರಾಷ್ಟ್ರೀಯ ಹೆದ್ದಾರಿಯ ಸಮೀಪದಲ್ಲಿ ಒಂದಷ್ಟು ಜಾಗವನ್ನು ಬಳಸಿ ಬೇಲಿ ಹಾಕಿ ಮನೆ ಕಟ್ಟಿ ವಾಸ ಮಾಡತೊಡಗಿದ್ದರು.

ಈಗ ವರ್ಷ ಎರಡು ಕಳೆದಿದೆ.

ಅಧಿಕಾರಿಗಳು ಕಾನೂನನ್ನು ಕೈಗೆತ್ತಿಕೊಂಡು ಬಾರದಿರುವುದಿಕ್ಕೆ ಪ್ರಮುಖ ಕಾರಣ ಸುತ್ತಲಿನ ಭೂಪ್ರದೇಶ. ಮೈಲುಗಟ್ಟಲೆ ನಿರ್ಜನ ಪ್ರದೇಶ, ಬರಡು ಭೂಮಿಗಿಂತಲೂ ಭೀಕರ ವಾತಾವರಣ. ಅಲ್ಲಿಂದ ಎರಡು ಕಿಲೋಮೀಟರ್ ನಡೆದರೆ ದೊಡ್ಡ ಕೂಡು ರಸ್ತೆ. ಅಲ್ಲಿ ಒಂದು ಸೇಂದಿ ಅಂಗಡಿ, ಒಂದು ದಿನಸಿ ಅಂಗಡಿ, ಪುಟ್ಟದೊಂದು ಚಹದಂಗಡಿಗಳಿವೆ. ವಾಹನಗಳನ್ನು ಸ್ವಚ್ಛಗೊಳಿಸುವ ಒಂದು ಶೆಡ್ಡೂ ಇದೆ. ಅದಕ್ಕಾಗಿ ಸಂಜೆ ಐದರ ನಂತರ ಅಲ್ಲಿ ಮಣ್ಣು ತುಂಬುವ ಲಾರಿಗಳು ಬಂದು ನಿಂತುಕೊಳ್ಳುತ್ತವೆ.

ಅಂಗಡಿಗಳ ತಿಟ್ಟೆಯಲ್ಲಿ ನಿದ್ರೆಯಿಲ್ಲದೆ ಬೆಂಗಾವಲಾಗಿ ನಿಂತಿದ್ದು, ಎಲ್ಲೇ ತೋಡಿದರೂ ನಾಲ್ಕು ಕೋಲಿಗೆ (ಒಂದು ಕೋಲು=3 ಅಡಿ) ನೀರು ಒಸರುವುದು ಗುಳಿಗನ ಕೃಪೆಯಿಂದ ಎಂದು ಪಣಿಕ್ಕರ ಅವರ ನಂಬಿಕೆ. ಅದಕ್ಕೆ ಅವರು ಆಗಾಗ ಗುಳಿಗನನ್ನು ಸಂಧಿಸುತ್ತಿರುತ್ತಾರೆ. ಅದಕ್ಕಾಗಿ ಪಣಿಕ್ಕರ್ ತಿಂಗಳಿಗೊಮ್ಮೆ ಒಂದು ಕರಟದಲ್ಲಿ ಪರಿಶುದ್ಧವಾದ ಸೇಂದಿಯನ್ನು ಸಂಪಿಗೆ ಮರದ ಬುಡದಲ್ಲಿ ಕಲಶವಾಗಿ ಇಡುತ್ತಾರೆ. ಅಲ್ಲಿನ ಬಹುತೇಕ ಎಲ್ಲಾ ಸೇಂದಿ ಅಂಗಡಿಗಳು ಮುಚ್ಚಿದ್ದರಿಂದ ಉತ್ತಮ ಮಟ್ಟದ ಸೇಂದಿಗೆ ಪಣಿಕ್ಕರ್ ಚಾತ್ತಮತ್ತಗೇ ಹೋಗಬೇಕು.

ಜಾನಕಿ ಕುದಿಯುವ ನೀರಿನಿಂದ ಬಟ್ಟೆಗಳನ್ನು ತೆಗೆದು ಸೋಪು ಹಚ್ಚತೊಡಗಿದಳು. ಪಣಿಕ್ಕರ್ ಅಂಗಳದಲ್ಲಿ ಕಾಲು ಚಾಚಿ ಕುಳಿತು ಹೊಸ ಕೋಲದ ಪಾಡ್ದನವನ್ನು ರಾಗವಾಗಿ ಹಾಡತೊಡಗಿದರು. ಸೊಂಟದ ಸುತ್ತಲೂ ಪಂಜನ್ನು ಚುಚ್ಚಿ ಆಡುವ ಬೆಂಕಿಯ ಕೋಲ ಈ ಭಗವತಿ.